ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಸೇತುವೆ ಕಟ್ಟಲು ಒಂದನೇ ಪ್ರತಿವಾದಿ ಸುಮಾರು 18 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸಾಕ್ಷಿ ನಮ್ಮ ಮನೆಯ ಹಣದಿಂದ ಖರ್ಚು ಮಾಡಿದ್ದಾರೆ. ಆದರೇ 14 ಲಕ್ಷ ಖರ್ಚಾಗಿರುತ್ತದೆ . 14 ಲಕ್ಷ ಎಲ್ಲಿ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕುಂದಾಪುರದ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ಹಣ ಬಂದಿತ್ತು ಎಂದು ತಿಳಿಸಿರುತ್ತಾರೆ. ಕುಂದಾಪುರದ ಆಸ್ತಿ ಮಾರಿದಾಗ ಬಂದ ಕಪ್ಪು ಹಣ ಎಂದು ತಿಳಿಸಿರುತ್ತಾರೆ. ಎಲ್ಲಾ ಹಣವನ್ನು ನಗದಿನ ರೂಪದಲ್ಲಿ ಚೆಕ್ ಮುಖೇನ ಕೊಟ್ಟಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವನ್ನು ಒಂದನೇ ಪ್ರತಿವಾದಿಯೇ ಕೊಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ. ಸೇತುವೆ ಕಟ್ಟಲು ಒಂದನೇ ಪ್ರತಿವಾದಿ ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಖರೀದಿಸಿದ ಬಗ್ಗೆ ಮತ್ತು ಕೆಲಸದವರಿಗೆ ಹಣ ಕೊಟ್ಟ ಬಗ್ಗೆ ಬಿಲ್ಲುಗಳನ್ನು ಇಟ್ಟಿದ್ದು ಅದೇ ಈ ಬಿಲ್ಲುಗಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ ಪ್ರತಿವಾದಿಯೇ ಎಲ್ಲಾ ಲೆಕ್ಕ ಇಡುತಿದ್ದರು. ಆದ್ದರಿಂದ ಅವರ ಬಳಿ ಇದೆ ಎಂದು ತಿಳಿಸಿರುತ್ತಾರೆ. ಕಪ್ಪು ಹಣದಿಂದ ಸೇತುವೆ ಕಟ್ಟಲಾಗಿದೆ ಎಂದು ನಮ್ಮ ವಾದಪತ್ರದಲ್ಲಿ ಬರೆದಿಲ್ಲ . ಕಪ್ಪು ಹಣದಿಂದ ಸೇತುವೆ ಕಟ್ಟಲಾಗಿದೆ ಎನ್ನುವ ಬಗ್ಗೆ ಬಾಯಿಮಾತಿನ ಹೇಳಿಕೆ ಅಲ್ಲದೇ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮನೆಯಿಂದಲೇ ಒಂದನೇ ಪ್ರತಿವಾದಿ ಹಣ ತೆಗೆದುಕೊಂಡು ಹೋಗಿರುತ್ತಾರೆ ಎಂದು

ತಿಳಿಸಿರುತ್ತಾರೆ. ಈ ಬಗ್ಗೆ ದಾಖಲೆ ಇಲ್ಲ. ಆದರೇ ಎಲ್ಲವನ್ನು ಒಂದನೇ ಪ್ರತಿವಾದಿ ನೋಡಿಕೊಳ್ಳುತಿದ್ದರು. ಎಲ್ಲಾ ಬಿಲ್ಲುಗಳು ಮತ್ತು ರಸೀದಿಗಳು ಒಂದನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅವರು ಎಲ್ಲಾ ನೋಡಿಕೊಳ್ಳುತಿದ್ದರು ಆದ್ದಂರಿದ ಎಲ್ಲಾ ಅವರ ಹೆಸರಿನಲ್ಲಿ ಇದೆ ಎಂದು ತಿಳಿಸಿರುತ್ತಾರೆ . ಖರೀದಿ ಲಗಾಯಿತಿನಿಂದ ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯವನ್ನು ಸಹ ಒಂದನೇ ಪ್ರತಿವಾದಿಯೇ ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಮನೆಯ ದುಡ್ಡಿನಿಂದ ಕಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಎಲ್ಲವೂ ಕಪ್ಪು ಹಣ ಎಂದು ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವೂ ಕಪ್ಪು ಹಣ ಅಲ್ಲ ಸ್ವಲ್ಪ ಕಪ್ಪು ಹಣ, ಸ್ವಲ್ಪ ಬಿಳಿ ಹಣದಿಂದ ಕಟ್ಟುತಿದ್ದಾರೆ, ಆದರೇ ನಮ್ಮ ಮನೆಯ ಹಣದಿಂದ ಕಟ್ಟುತಿದ್ದಾರೆ ಎಂದು ತಿಳಿಸಿರುತ್ತಾರೆ . ಯಾರಿಂದ ಸೇತುವೆ ಕಟ್ಟಿಸಿದರು ಮತ್ತು ಸಿಮೆಂಟ್ ಯಾರಿಂದ ತರಿಸಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸೆಂಟ್ರಿಂಗ್ ನ್ನು ಕೋಟಾದ ಒಬ್ಬ ಆಚಾರಿ ಮಾಡಿರುತ್ತಾರೆ ಅವರ ಹೆಸರು ನೆನಪಿಲ್ಲ . ಸಿಮೆಂಟ್ ನ್ನು ಲೋಕಲ್ ಎಜೆಂಟ್ ಗಳಿಂದ ತೆಗೆದುಕೊಂಡಿರುತ್ತಾರೆ . Redimix company ರವರು ಜಾಗಕ್ಕೆ ತಂದು ಹಾಕಿ ಆ ಬಗ್ಗೆ ಡೆಲಿವರಿ ನೋಟನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ slab ಹಾಕುವಾಗ Redimix ನವರೇ ತಂದುಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. Redimix company ಎಷ್ಟು ಸಲ ಡೆಲಿವರಿ ಮಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಖರೀದಿ ಮತ್ತು ಪಾವತಿಗಳು ದಾಖಲೆಯ ಮುಖಾಂತರವೇ ಆಗಿದೆ ಎಂದರೆ ಸರಿಯಲ್ಲ. ಕೇಸಿನ ಅನುಕೂಲಕ್ಕಾಗಿ ಕಪ್ಪು ಹಣ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ 7 ರಿಂದ 16 ಆಸ್ತಿಗಳ ಸಂಬಂಧ 3

ಸಿವಿಲ್ ವ್ಯಾಜ್ಯಗಳು ಈಗಲೂ ಕೂಡ ಉಡುಪಿಯ 4 ನೇ ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ ನಡೆಯುತಿವೆ ಎಂದರೆ ಸರಿ. ಎಲ್ಲಾ ದಾವೆಗಳನ್ನು ಒಂದನೇ ಪ್ರತಿವಾದಿಯೇ ನೋಡಿಕೊಳ್ಳುತಿದ್ದಾರೆ ಎಂದರೆ ಸಾಕ್ಷಿ ನಮ್ಮ 4 ಜನರ ಪರವಾಗಿ ಆಸ್ತಿಯನ್ನು ಒಂದನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಲಾಗಿತ್ತು. ಆದ್ದರಿಂದ ಅವರೇ ಸಿವಿಲ್ ವ್ಯಾಜ್ಯಗಳನ್ನು ನೋಡಿಕೊಳ್ಳುತಿದ್ದಾರೆ ಎಂದು ತಿಳಿಸಿರುತ್ತಾರೆ. ನಾವು 4 ಜನ ಎಂದರೇ ನಮ್ಮ ತಂದೆ , ತಾಯಿ ಮತ್ತು ನಾವು 3 ಜನ ಅಣ್ಣ ತಮ್ಮಂದಿರು. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಾಯಿ ಮತ್ತು ನಾವು 3 ಜನ ಅಣ್ಣ ತಮ್ಮಂದಿರ ಪರವಾಗಿ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ನಮ್ಮೆಲ್ಲರ ಪರವಾಗಿ ಖರೀದಿಸಲಾಗಿದೆ ಎನ್ನುವ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಖರೀದಿ ಆಗಿರುವುದೇ ದಾಖಲೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು ಮನೆಯ ದುಡ್ಡಿನಿಂದ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ವ್ಯಾಜ್ಯ ಮಾಡುವ ಮೊದಲು ಸ್ವದ್ರಿ ಆಸ್ತಿಗಳು ಜಂಟೀ ಹಕ್ಕಿನ ಆಸ್ತಿಗಳು ಎಂದು ಅದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್ ನಲ್ಲಿ ಕಾಣಸಿಲ್ಲ. ಕಾರಣ 2020 ರವರೆಗೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್ ನ್ನು ಒಂದನೇ ಪ್ರತಿವಾದಿಯೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ದಾವೆ ದಾಖಲು ಮಾಡುವ ಸಮಯದಲ್ಲಿ ಕೂಡ ನಾನು ಅದನ್ನು ಪರಿಶೀಲನೆ ಮಾಡಿಲ್ಲ . 2020 ರನಂತರ ನಾನು ರಿಟನ್ಸ್ ಸಲ್ಲಿಸಿದ್ದೇನೆ. ನಾನು 2020 ರ ನತಂರ ಸಲ್ಲಿಸಿದ ರಿಟನ್ಸ್ ನಲ್ಲಿ ಜಂಟಿ ಹಕ್ಕಿನ ಆಸ್ತಿಗಳು ಎಂದು ಕಾಣಿಸಿಲ್ಲ. ದಾವೆ ಇರುವ ಕಾರಣ ತೋರಿಸಿಲ್ಲ ಎಂದು ತಿಳಿಸಿರುತ್ತಾರೆ. ಸ್ವತ್ತುಗಳಿಗೆ ಸಂಬಂಧವಾಗಿ ದಾವೆ ಇರುತ್ತದೆ ಎಂದು ರಿಟನ್ಸ್ ನಲ್ಲಿ ಕಾಣಿಸಿಲ್ಲ . ಕಾರಣ

ತೋರಿಸುವ ಅವಶ್ಯಕತೆ ಇಲ್ಲ ಎಂದು ನಮ್ಮ CA ಹೇಳಿರುತ್ತಾರೆ. ಒಂದನೇ ಪ್ರತಿವಾದಿ ಸಲ್ಲಿಸಿದ ರಿಟನ್ಸ್ ನಲ್ಲಿ ಷದ್ರಿ 7 ರಿಂದ 16 ಆಸ್ತಿಗಳು ಸ್ವಂತ ನೆಲೆಯಲ್ಲಿ ಖರೀದಿಸಿದ ಆಸ್ತಿಗಳು ಎಂದು ಕಾಣಿಸಿದ್ದಾರೆ ಎಂದರೆ ನಾನು ನೋಡಿಲ್ಲ . ಕುಟುಂಬದ ಹಣದಿಂದ ಆಸ್ತಿ ಖರೀದಿಸಲಾಗಿದೆ ಮತ್ತು ಜಂಟೀ ಹಕ್ಕಿನ ಆಸ್ತಿಗಳು ಎಂದು ನಾನು ಕಂದಾಯ ಇಲಾಖೆಗೆ ಲಿಖಿತವಾಗಿ ಹೇಳಿಲ್ಲ . ನಾನು ಲಕ್ಷ್ಮೀ ಶೆಟ್ಟಿ ಮತ್ತು ಅವರ ಮಕ್ಕಳ ವಿರುದ್ಧ ಸಲ್ಲಿಸಿದ್ದ ಹುಬ್ಬಳ್ಳಿ ನ್ಯಾಯಲಯದ ಖಾಸಗಿ ದೂರಿನಲ್ಲಿ ಐಟನಂ 7 ರಿಂದ 16 ಸ್ವತುತಗಳು ನನ್ನ ಅಣ್ಣನ ಸ್ವಂತು ಆಸ್ತಿಗಳು ಎಂದು ಹೇಳಿದ್ದೇನೆ ಎಂದರೆ ನೆನಪಿಲ್ಲ . ಸಾಕ್ಷಿ ಮುಂದುವರಿದು ಅದನ್ನು ಕೂಡ ನಮ್ಮ ಅಣ್ಣ ಒಂದನೇ ಪ್ರತಿವಾದಿ ಬರೆಯಿಸಿರಬಹುದು ಎಂದು ತಿಳಿಸಿರುತ್ತಾರೆ. ಹುಬ್ಬಳ್ಳಿ ನ್ಯಾಯಲಯದಲ್ಲಿ ನಾನು ಪ್ರಮಾಣ ಪತ್ರ ಕೂಡ ಹಾಕಿದ್ದೇನೆ ಎಂದರೆ ಒಂದನೇ ಪ್ರತಿವಾದಿಯಾದ ನಮ್ಮ ಅಣ್ಣ ಹೇಳುತಿದ್ದ ಆತ ಹೇಳಿದ ರೀತಿ ನಾವು ಕೇಳುತಿದ್ದೆವು ಎಂದು ತಿಳಿಸಿರುತ್ತಾರೆ. ಐಟಂ ನಂ. 7 ರಿಂದ 16 ಆಸ್ತಿಗಳು ಒಂದನೇ ಪ್ರತಿವಾದಿಯ ಸ್ವಂತ ಆಸ್ತಿಗಳಾಗಿರುವುದರಿಂದ ಅವರು ಇಚ್ಚಾನುಸಾರವಾಗಿ ವಿಲೆವಾರಿ ಮಾಡುವ ಅಧಿಕಾರ ಉಳ್ಳವರಾಗಿರುತ್ತಾರೆ ಎಂದರೆ ಸಾಕ್ಷಿ ಒಂದನೇ ಪ್ರತಿವಾದಿ ಆ ರೀತಿ ದಾಖಲೆಗಳನ್ನು ಮಾಡಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ. ಒಂದನೆ ಪ್ರತಿವಾದಿ ಆಸ್ತಿಗಳನ್ನು ಅನುಭವಿಸಬಾರದು ಎಂದು ಅವರ ಸ್ವಂತ ಆಸ್ತಿಗಳನ್ನು ಕೂಡ ಸೇರಿಸಿ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಯಾವುದೇ ಸ್ವಂತ ಆಸ್ತಿಗಳು ಇಲ್ಲ ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳು ಎಂದು ತಿಳಿಸಿರುತ್ತಾರೆ . ನನ್ನ ಹೆಸರಿನಲ್ಲಿ ಇರುವ ಶೇರ್ಸ್ ಗಳು , ಆಸ್ತಿಗಳು , 2 ನೇ ಪ್ರತಿವಾದಿಗಳ ಹೆಸರಿಲ್ಲಿ ಇರುವ ಆಸ್ತಿಗಳು ಮತ್ತು ಶೇರ್

ಗಳು ಮತ್ತು ಠೇವಣಿ ಹಣಗಳು ಕೂಡ 2020 ರವರೆಗೆ ಒಟ್ಟು ಕುಟುಂಬದ ಆಸ್ತಿಗಳು ಅದೇ ರೀತಿ ಒಂದನೇ ಪ್ರತಿವಾದಿ ಹೆಸನರಿಲ್ಲಿ ಇರುವ ಆಸ್ತಿಗಳು, ಶೇರ್ ಮತ್ತು ಠೇವಣಿ ಕೂಡ ಒಟ್ಟು ಕುಟುಂಬದ ಆಸ್ತಿಗಳು ಎಂದು ತಿಳಿಸಿರುತ್ತಾರೆ . 2020 ರ ನಂತರ ನನ್ನ ಹೆಸರಿನಲ್ಲಿ ಇರುವ ಮತ್ತು 2 ನೇ ಪ್ರತಿವಾದಿಯಲ್ಲಿ ಇರುವ ಆಸ್ತಿಗಳು , ಶೇರ್ ಗಳು , ಠೇವಣಿಗಳ ಬಗ್ಗೆ ದಾವೆಯನ್ನು ಹಾಕಿಲ್ಲ . ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಆಸ್ತಿಗಳಿಗೆ ಮಾತ್ರ 2020 ರ ನಂತರ ದಾವೆ ಹಾಕಿದ್ದೇನೆ ಎಂದರೆ ಸಾಕ್ಷಿ ಮನೆಯ ಆಸ್ತಿಗಳಿಗೆ ಹಾಕಿದ್ದೇನೆ ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.